ಕರ್ನಾಟಕ ಸರ್ಕಾರ
ತಾಂತ್ರಿಕ ಶಿಕ್ಷಣ ಇಲಾಖೆ

ಸಂಖ್ಯೆ: ಡಿಟಿಇ/83/ಇಎಸ್‌ಟಿ 4 (ಬಿ) 2012-13 ಭಾಗ-2

ನಿರ್ದೇಶಕರವರ ಕಛೇರಿ
ತಾಂತ್ರಿಕ ಶಿಕ್ಷಣ ನಿರ್ದೇಶನಾಲಯ
ಅರಮನೆ ರಸ್ತೆ, ಬೆಂಗಳೂರು-560001
ದಿನಾಂಕ: 23.12.2017

## ಸುತ್ತೋಲೆ

ವಿಷಯ: ಅನುದಾನಿತ ಶಿಕ್ಷಣ ಸಂಸ್ಥೆಗಳ ಸಿಬ್ಬಂದಿಗಳ ಅನುದಾನಪೂರ್ವದ ಸೇವೆಯನ್ನು ನಿವೃತ್ತಿ ವೇತನಕ್ಕೆ ಅರ್ಹತಾದಾಯಕ ಸೇವೆಯೆಂದು ಪರಿಗಣಿಸಿದಲ್ಲಿ ಸರ್ಕಾರವು ಭರಿಸಬೇಕಾಗಬಹುದಾದ ಅಂದಾಜು ವೆಚ್ಚದ ಬಗ್ಗೆ.

ಉಲ್ಲೇಖ: ಅನುದಾನಿತ ಶಿಕ್ಷಣ ಸಂಸ್ಥೆಗಳ ಸಿಬ್ಬಂದಿಗಳಿಗೆ ಕಾಲ್ಪನಿಕ ವೇತನ ನಿಗದಿಪಡಿಸುವ ಸಂಬಂಧ ರಚಿಸಲಾದ ಪರಿಶೀಲನಾ ಸಮಿತಿಯ ದಿ: 19.02.2017 ರ ಸಭೆಯಲ್ಲಿ ನಡೆದ ಚರ್ಚೆ.

*-*-*-*-*

ವಿಷಯಕ್ಕೆ ಸಂಬಂಧಿಸಿದಂತೆ, ದಿ: 19.02.2017 ರಂದು ಅನುದಾನಿತ ಶಿಕ್ಷಣ ಸಂಸ್ಥೆಗಳ ಸಿಬ್ಬಂದಿಗಳಿಗೆ ಕಾಲ್ಪನಿಕ ವೇತನ ನಿಗದಿಪಡಿಸುವ ಸಂಬಂಧ ರಚಿಸಲಾದ ಪರಿಶೀಲನಾ ಸಮಿತಿಯ ಸಭೆಯಲ್ಲಿ ನಡೆದ ಚರ್ಚೆಯ ಹಿನ್ನೆಲೆಯಲ್ಲಿ, ತಾಂತ್ರಿಕ ಶಿಕ್ಷಣ ಇಲಾಖೆಯ ಅಧೀನದ ಅನುದಾನಿತ ಇಂಜಿನಿಯರಿಂಗ್ ಕಾಲೇಜು/ಪಾಲಿಟೆಕ್ನಿಕ್ ಸಂಸ್ಥೆಗಳ ಅನುದಾನಿತ ಸಿಬ್ಬಂದಿಗಳ ಅನುದಾನ ಪೂರ್ವದ ಸೇವೆಯನ್ನು ನಿವೃತ್ತಿ ವೇತನಕ್ಕೆ ಅರ್ಹತಾದಾಯಕ ಸೇವೆಯೆಂದು ಪರಿಗಣಿಸಿದಲ್ಲಿ, ಸರ್ಕಾರವು ಭರಿಸಬೇಕಾಗಬಹುದಾದ ಅಂದಾಜು ವೆಚ್ಚದ ಬಗ್ಗೆ ಈ ಸುತ್ತೋಲೆಯೊಂದಿಗೆ ಲಗತ್ತಿಸಿರುವ ಅನುಬಂಧದಲ್ಲಿ ಮಾಹಿತಿಯನ್ನು ದಿ: 30.12.2017 ರಂದು ಪೂರ್ವಾಹ್ನ 11.30 ಕ್ಕೆ ತಾಂತ್ರಿಕ ಶಿಕ್ಷಣ ನಿರ್ದೇಶನಾಲಯಕ್ಕೆ ಸ್ವತಃ ಹಾಜರಾಗಿ ನೀಡಲು ತಿಳಿಸಲಾಗಿದೆ. ಸದರಿ ಮಾಹಿತಿ/ದಾಖಲೆಗಳ ವಿದ್ಯುನ್ಮಾನ ಪ್ರತಿಗಳನ್ನು (ಎಂ.ಎಸ್.ಎಕ್ಸೆಲ್‌ನಲ್ಲಿ) ಇ-ಮೇಲ್ ಮೂಲಕ (bngdte@gmail.com) ಸಲ್ಲಿಸಲು ಈ ಮೂಲಕ ತಿಳಿಸಲಾಗಿದೆ; ಒಂದು ವೇಳೆ ಸದರಿ ಮಾಹಿತಿಯನ್ನು ನಿಗದಿತ ದಿನಾಂಕದೊಳಗೆ ಸಲ್ಲಿಸದಿದ್ದಲ್ಲಿ ಸಂಬಂಧಪಟ್ಟ ಸಂಸ್ಥೆಗಳ ಪ್ರಾಂಶುಪಾಲರ ವಿರುದ್ಧ ಶಿಸ್ತಿನ ಕ್ರಮ ಕೈಗೊಳ್ಳಲಾಗುವುದು.

ನಿರ್ದೇಶಕರು
ತಾಂತ್ರಿಕ ಶಿಕ್ಷಣ ಇಲಾಖೆ

ಇವರಿಗೆ:

ಎಲ್ಲಾ ಅನುದಾನಿತ ಇಂಜಿನಿಯರಿಂಗ್ ಕಾಲೇಜುಗಳ ಮತ್ತು
ಅನುದಾನಿತ ಪಾಲಿಟೆಕ್ನಿಕ್ ಸಂಸ್ಥೆಗಳ ಪ್ರಾಂಶುಪಾಲರುಗಳಿಗೆ.

ಪ್ರತಿ:

ತಾಂತ್ರಿಕ ಶಿಕ್ಷಣ ನಿರ್ದೇಶನಾಲಯದ ಇ-ಆಡಳಿತ ವಿಭಾಗಕ್ಕೆ (ಇಲಾಖಾ ಜಾಲತಾಣದಲ್ಲಿ ಪ್ರಕಟಿಸಲು)

<u>ಅನುಬಂಧ</u>

ತಾಂತ್ರಿಕ ಶಿಕ್ಷಣ ಇಲಾಖೆಯ ಅಧೀನದ ಅನುದಾನಿತ ಇಂಜಿನಿಯರಿಂಗ್ ಕಾಲೇಜು/ಪಾಲಿಟೆಕ್ನಿಕ್ ಸಂಸ್ಥೆಗಳ ಅನುದಾನಿತ ಸಿಬ್ಬಂದಿಗಳಿಗೆ ಅನುದಾನ ಪೂರ್ವದ ಸೇವೆಯನ್ನು ಅರ್ಹತಾದಾಯಕ ಸೇವೆಯೆಂದು ಪರಿಗಣಿಸಿದಲ್ಲಿ ನಿಗದಿಪಡಿಸಬೇಕಾಗಬಹುದಾದ ನಿವೃತ್ತಿ ವೇತನದ ವಿವರ.

| ಕ್ರ. ಸಂ. | ಸಿಬ್ಬಂದಿಯ ಹೆಸರು | ಜನ್ಮ ದಿನಾಂಕ (ದಿ./ತಿಂ./ವರ್ಷ) | ಮೂಲ ನೇಮಕಾತಿ ದಿನಾಂಕ (ದಿ./ತಿಂ./ವರ್ಷ) | ಅನುದಾನಕ್ಕೆ ಒಳಪಟ್ಟ ದಿನಾಂಕ | ನಿವೃತ್ತಿ ದಿನಾಂಕಕ್ಕೆ ಲಭ್ಯವಾಗುವ ಒಟ್ಟು ಅನುದಾನಿತ ಸೇವಾವಧಿ | ಅನುದಾನರಹಿತ ಅವಧಿಯಲ್ಲಿ ಸಲ್ಲಿಸಿರುವ ಸೇವಾವಧಿ | ನಿವೃತ್ತಿ ವೇತನಕ್ಕೆ ಅರ್ಹತಾದಾಯಕ ಸೇವೆಯೆಂದು ಪರಿಗಣಿಸಬೇಕಾಗಬಹುದಾದ (ಅನುದಾನ ಸೇವಾವಧಿ) | ಅನುದಾನಿತ ಸೇವೆಯನ್ನು ಮಾತ್ರ ಪರಿಗಣಿಸಿದಲ್ಲಿ ನಿಗದಿಪಡಿಸಬೇಕಾದ ನಿವೃತ್ತಿ ವೇತನ & ಇತರೆ ಉಪಲಬ್ಧಗಳು | ಅನುದಾನ ಪೂರ್ವದ ಅವಧಿಯನ್ನು ಅರ್ಹತಾದಾಯಕ ಸೇವೆಯೆಂದು ಪರಿಗಣಿಸಿ ನಿಗದಿಪಡಿಸಬೇಕಾದ ನಿವೃತ್ತಿ ವೇತನ | ಮೂಲ ನೇಮಕಾತಿ ದಿನಾಂಕದಿಂದ ಕಾಲ್ಪನಿಕವಾಗಿ ವೇತನ ನಿಗದಿಗೆ ಪರಿಗಣಿಸಿದಲ್ಲಿ ನಿಗದಿಪಡಿಸಬೇಕಾದ ನಿವೃತ್ತಿ ವೇತನ & ಬಾಕಿ ಉಪಲಬ್ಧಗಳು | ಷರಾ |
|---|---|---|---|---|---|---|---|---|---|---|---|
| (1) | (2) | (3) | (4) | (5) | (6) | (7) | (8) | (9) | (10) | (11) | (12) |
| | | | | | | | | | | | |

ಪ್ರಾಂಶುಪಾಲರು